ಕರಡು ಯೋಜನೆಯಲ್ಲಿ ಈ ಆಸ್ಪತ್ರೆಯೂ ಸೇರಿದೆ. ಇದು 1ನೇ ಏಪ್ರಿಲ್ 1996 ರಿಂದ ಚಾಲಿಗೆ ಬರುತ್ತಿದೆ. ಈಗಾಗಲೇ ವಿಶ್ವಬ್ಯಾಂಕಿನ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಆಗುತ್ತಿದೆ. ಚರ್ಚೆಗ ಸಮಯನ್ನು ಇನ್ನು ಒಂದು ತಿಂಗಳೊಳಗೆ ಮಾಡಿ ಏಪ್ರಿಲ್ ಒಂದರಿಂದ ಇದು ಚಾಲಿಗೆ ಬರುತ್ತದೆ. ಇದನ್ನು ನೂರು ಪಡ್ಡಿನ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡತಕ್ಕಂಥಾವ್ಯಕ್ಕೆ ಆ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಮತ್ತು ಇಲಾಖೆಯ ಅಧಿಕಾರಿಗಳು ಕೂಡ ಇದರ ಬಗ್ಗೆ ಕಾರ್ಯತತ್ಪರರಾಗಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಎ.ಆರ್. ಗ್ರಾಂಟ್ ಆಸ್ಪತ್ರೆಯ ಗ್ರಾಂಟ್ ಬಿಡಿದೆ ಇದನ್ನು ಜಾಸ್ತಿ ಮಾಡಬೇಕಾಗಿದೆ. ಯಾವುದೋ ಕಾಲದಲ್ಲಿ ಕಟ್ಟಿರತಕ್ಕಂಥ ಆಸ್ಪತ್ರೆಗಳು ಇವೆ. ಒಂದು ಕಾಪಿರಿ, ಎರಡು ಕಾಪಿರಿ ಕೊಟ್ಟರೆ ಪೈಂಟ್ ಮಾಡುವುದಕ್ಕಾಗುವುದಿಲ್ಲ, ಸುಣ್ಣಬಣ್ಣ ಮಾಡುವುದಕ್ಕಾಗುವುದಿಲ್ಲ, ಆಪರೇಷನ್ ಥಿಯೇಟರನ್ನು ಪ್ರತಿವರ್ಷ ಸರಿ ಮಾಡದೇ ಹೋದರೆ, ತಮಗೆ ಗೊತ್ತಿದೆ, ಅಲ್ಲಿ ಸರಿಯಾಗಿ ಆಪರೇಷನ್ ನಡೆಯುವುದಿಲ್ಲ. ದಯಮಾಡಿ ಇದನ್ನು ಹೆಚ್ಚಿಸುವಂಥಾದ್ದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಎಂ. ಪಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಈ ಒಂದು ಉಪ ಪ್ರಶ್ನೆ ಉದ್ಭವವಾಗದಿದ್ದರೂ, ಇದು ನಿಜ. ಮೇಸಟಿನಸ್ಸ್ ಗ್ರಾಂಟ್ ಎಂದು ಹೇಳುತ್ತಿರತಕ್ಕಂಥಾದ್ದನ್ನು ಯಾವುದೋ ಒಂದು ಕಾಲದಲ್ಲಿ ಫಿಕ್ಸ್ ಮಾಡಿರತಕ್ಕಂಥಾದ್ದು. ಈಗಾಗಲೇ ಇದನ್ನು ಕಾಮಗಾರಿ ಇಲಾಖೆಯಲ್ಲಿರತಕ್ಕಂಥ ಸಚಿವರ ಜೊತೆಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಯಾವುದೋ ಒಂದು ಕಾಲದಲ್ಲಿ ಫಿಕ್ಸ್ ಮಾಡಿರತಕ್ಕಂಥ ಮೂರು ಪರ್ಸಂಟೋ ಅಥವಾ ಒಂದು ಪರ್ಸಂಟೋ ಏನೋ ಅಷ್ಟು ಗ್ರಾಂಟನ್ನು ಕೊಡುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಕಾರ್ಯತತ್ಪರರಾಗಿದ್ದಾರೆ ಮತ್ತು ಮಂತ್ರಿಗಳು ಕೂಡ ಇದನ್ನು ಹೆಚ್ಚಿಸಬೇಕು ಎಂದು ಹೇಳುತ್ತಿರತಕ್ಕಂಥಾದ್ದನ್ನು ಅವರ ಚಿಂತನೆಯಲ್ಲಿದೆ. ಮುಂದಿನ ವರ್ಷಕ್ಕೆ ಇದರ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.

ಹನೂರು ಕ್ಷೇತ್ರದ ತಳ್ಳನೂರು ಗ್ರಾಮದಲ್ಲಿ ಆರೋಗ್ಯ ಕೇಂದ್ರ.

161 - ಶ್ರೀ ಪಿ. ನಾಗಪ್ಪ (ಹನೂರು) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹನೂರು ಕ್ಷೇತ್ರದ ತಳ್ಳನೂರು ಗ್ರಾಮದಲ್ಲಿ ಆರೋಗ್ಯ ಕೇಂದ್ರ ಯಾವಾಗ ಪ್ರಾರಂಭವಾಯಿತು?

ಆ) ಈ ಆರೋಗ್ಯ ಕೇಂದ್ರಕ್ಕೆ ಯಾವಾಗ ವೈದ್ಯರನ್ನು ನೇಮಿಸಲಾಗಿದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :

ಅ) ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರ ಮಂಜೂರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ನಾಗಪ್ಪ : ಮಾನ್ಯ ಸಭಾಧ್ಯಕ್ಷರೆ, ಇಲ್ಲಿಗೆ ಒಂದು ಆಸ್ಪತ್ರೆ ಸುಮಾರು 3 ವರ್ಷಗಳ ಹಿಂದೆ ಮಂಜೂರಾಗಿದ್ದು ಈಗಾಗಲೇ ಅಲ್ಲಿ ಒಂದು ಆಸ್ಪತ್ರೆ ಕಟ್ಟಿಡ ಇದೆ ಮತ್ತು ಅಲ್ಲಿ ಕಾಂಪೌಂಡರಗಳೂ ಕೂಡ ಇದ್ದಾರೆ. ಸುಮಾರು 3 ವರ್ಷಗಳಿಂದ ಇಲ್ಲಿಗೆ ಔಷಧಿಗಳನ್ನು ಒದಗಿಸುತ್ತಿದ್ದಾರೆ. ಈಗಲೂ ಕೂಡ ಪ್ಯಾಕೆಟ್ಟನ್ನು ಬಿಚ್ಚಿದರೆ ಆ ಔಷಧಿಗಳು ಎಕ್ಸಪೈರಿ ಆಗಿ ಹೋಗುತ್ತಿವೆ. ಅಲ್ಲಿ ಒಂದು ಆಸ್ಪತ್ರೆ ಇರುವುದಂತೂ ನಿಜ. ಅದಕ್ಕೆ ಇಪ್ಪತ್ತನಾಲ್ಕರಗೂ ಯಾರೂ ಡಾಕ್ಟರನ್ನು ಹಾಕಲ್ಲ. ಈಗ ಹಾಕುತ್ತಾರಯ್ಯ!? ಅಮೇಲೆ ಏನು ಮಾಡುತ್ತಾರೆ ಏನ್ನುವುದನ್ನು ದಯವಿಟ್ಟು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷರೇ, ಈ ಕ್ಷೇತ್ರದಲ್ಲಿ ಒಂದು ಆಯುರ್ವೇದಿಕ್ ಆಸ್ಪತ್ರೆ ಇದ್ದು ಅದು ಕೆಲಸ ಮಾಡುತ್ತಿದೆ. ಆದರೆ ಇವರು ಕೇಳುತ್ತಿರುವಷ್ಟಕ್ಕೆಂಥಾದ್ದು, ಪ್ರಾಥಮಿಕ ಆರೋಗ್ಯ ಕೇಂದ್ರವೊಂದು ಆಗಬೇಕು ಎಂದು. 10 ಕಿಲೋಮೀಟರ್ ಒಳಗಡೆ ಸುಮಾರು ನಾಲ್ಕೈದು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೇರೆ ಜಾಗದಲ್ಲಿ ಕೆಲಸ ಮಾಡುತ್ತಿವೆ. ಇನ್ನೊಂದು ಕಾಮಗರ ಎಂದು ಹೇಳುವಂಥ ಸ್ಥಳದಲ್ಲಿ ಸುಮಾರು 6 ಕಿಲೋಮೀಟರ್ ದೂರದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಬೇಕು ಎಂದು ಹೇಳುತ್ತಿದ್ದಾರೆ, ಇವರ ಅವಶ್ಯಕತೆಯನ್ನೂ ಕೂಡ ಸರ್ಕಾರ ಗಮನಕ್ಕೆತೆಗೆದುಕೊಂಡು, ಬಹುಶಃ ಒಂದು ಸರ್ವೆ ಮಾಡಿ ಮುಂದಿನ ವರ್ಷದಲ್ಲಿ ಈ ದಿಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿದ್ದರೆ ಬಹುಶಃ ನಾನು ಅದಕ್ಕೆ ಪ್ರಯತ್ನವನ್ನು ಪಡುತ್ತೇನೆ.

ಶ್ರೀ ಜಿ. ಎಸ್. ನಾಗಪ್ಪ : ಆಸ್ಪತ್ರೆ ಮಂಜೂರಾಗಿದೆ. ಮಂಜೂರಾಗಿ ಸುಮಾರು 3 ವರ್ಷವಾಗಿದೆ. ಇವತ್ತಿನವರೆಗೂ ಅಲ್ಲಿಗೆ ಒಬ್ಬ ಡಾಕ್ಟರನ್ನು ಹಾಕಿಲ್ಲ. ಅಲ್ಲಿ ಔಷಧಿಗಳೆಲ್ಲಾ ಹಾಳಾಗಿ ಹೋಗುತ್ತಿವೆ. ಅದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ನಾಣಯ್ಯ : ಮಂಜೂರಾದಂಥ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದ್ದರೆ ಅದನ್ನು ತುಂಬಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

ಹಾಸನದ 1000 ಹಾಸಿಗೆಯ ಆಸ್ಪತ್ರೆಯ ಪ್ರಗತಿ

162 - ಶ್ರೀ ಜೆ. ಶಿವರಾಮ (ಗಂಜಿಷಿ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ 1000 ಹಾಸಿಗೆಯ ಆಸ್ಪತ್ರೆ ಪ್ರಗತಿ ಯಾವ ಹಂತದಲ್ಲಿದೆ.

ಆ) ಪಿಪ್ಪ ಯೋಜನೆಯಡಿಯಲ್ಲಿ ಈ ಆಸ್ಪತ್ರೆಗೆ ಒದಗಿಸಲು ಕೈಗೊಂಡಿರುವ ಕ್ರಮವೇನು?

ಇ) 1000 ಹಾಸಿಗೆಗೆ ಸರ್ಕಾರ ಮಂಜೂರಾತಿ ಕೊಟ್ಟಾಗ ಮಂಜೂರಾತಿ ಮಾಡಿದ ನಕ್ಷೆ ಮತ್ತು ಯೋಜನೆಯಲ್ಲಿ ಬದಲಾವಣೆ ಇದೆಯೇ? ಇದ್ದಲ್ಲಿ ಏನೇನು?